ಘಾತಕವಾಗಿತ್ತು. ಇದರಿಂದಾಗುತ್ತಿದ್ದ ಮಾನಸಿಕ ಹಿಂಸೆಯ ತೀವ್ರತೆ ಆಘಾತಕಾರಿಯಾಗಿತ್ತು. ಅವನ ಹೊಡೆತಗಳು ಬಿದ್ದಾಗ, ತುಂಬಾ ನೋವಾಗುತ್ತಿತ್ತು. ಅವನು ಕೈಗಳಿಂದ, ಕೆಲವೊಮ್ಮೆ ಚಪ್ಪಲಿಯಿಂದ ಹೊಡೆಯುತ್ತಿದ್ದ. ಹೊಡೆಯುವುದಕ್ಕೆ ಮೊದಲು ಲೇಶಮಾತ್ರವೂ ಹಿಂದುಮುಂದು ಯೋಚಿಸುತ್ತಿರಲಿಲ್ಲ. ನಾನು ನೆಲದ ಮೇಲೆ ಬಿದ್ದು ಬಿಕ್ಕಳಿಸುತ್ತಾ ರೋದಿಸಿದಾಗಲೂ ಅವನಿಗೆ ಕರುಣೆ ಬರುತ್ತಿರಲಿಲ್ಲ.

ನನ್ನ ಹಿತಚಿಂತಕರು ನನ್ನನ್ನು, ನೀನೇಕೆ ಇಷ್ಟೆಲ್ಲಾ ಸಹಿಸಿದೆ ಎಂದು ಕೇಳುತ್ತಾರೆ. ನಾನಾಗ, ನಾನು ಸಕಾರಾತ್ಮಕ ಪ್ರವೃತ್ತಿಯ, ಕ್ಷಮಿಸುವಂಥ ಹೆಣ್ಣು. ನಾನು ಕೆಟ್ಟದ್ದನ್ನು ಕೂಡಲೇ ಮರೆತು ಮುಂದಕ್ಕೆ ಹೋಗುತ್ತೇನೆ. ಆದರೆ ನನ್ನ ಪತಿಯಂದಿರು ನನ್ನ ಈ ಸ್ವಭಾವವನ್ನು ತಪ್ಪಾಗಿ ಅರ್ಥ ಮಾಡಿಕೊಂಡು, ಇದರ ಲಾಭ ಪಡೆದರು ಎಂದು ಅವರಿಗೆ ಉತ್ತರಿಸುತ್ತೇನೆ.

ನನ್ನಿಂದ ಒಂದು ದೊಡ್ಡ ತಪ್ಪಾಗಿತ್ತು; ನಾನು ಲಾರ್ಸ್‌ಗೆ ಅಷ್ಟೊಂದು ಮುಂದುವರೆಯಲು ಬಿಟ್ಟೆ. ಅವನು ಮೊದಲ ಬಾರಿಗೆ ನನ್ನ ಮೇಲೆ ಕೈ ಮಾಡಿದ ದಿನವೇ ನಾನು ಒಂದು ದೃಢ ಹೆಜ್ಜೆಯನ್ನಿಡಬೇಕಿತ್ತು. ನಾನು ನಿರಂತರವಾಗಿ ಅವನಿಂದ ಹೊಡೆಸಿಕೊಳ್ಳುತ್ತಿದ್ದೆ, ಅವನೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಸದಾ ಸೆಣಸುತ್ತಿದ್ದೆ.

ಅಂದು ಮತ್ತೆ ಒಂದು ಸಣ್ಣ ವಿಷಯಕ್ಕೆ ಜಗಳ ಆರಂಭವಾಯಿತು. ನಾವು ವಾಸಿಸುತ್ತಿದ್ದ ಬಿಲ್ಡಿಂಗ್‌ನಲ್ಲಿ ಕೆಲವರ ಮನೆಯಲ್ಲಿ ಕಳ್ಳತನವಾಗಿತ್ತು. ಕಳ್ಳ ನಮ್ಮ ಬೇಸ್‌ಮೆಂಟ್‌ನಲ್ಲೂ ಗೋಡೆ ಕೊರೆದು ಕಳ್ಳತನ ಮಾಡಿದ್ದ. ಅಕ್ಕಪಕ್ಕದಲ್ಲಿದ್ದ ಮೂರ್ನಾಲ್ಕು ಸ್ಟೋರ್ ರೂಮನ್ನು ಕಳ್ಳ ತಡಕಾಡಿದ್ದ. ನಮ್ಮ ಪಕ್ಕದಲ್ಲಿ ಥಾಯ್ಲೆಂಡಿನ ಮಹಿಳೆ ಸುಫಾನ್ ಲೀ ವಾಸಿಸುತ್ತಿದ್ದಳು, ನಮ್ಮಿಬ್ಬರ ನಡುವೆ ಒಳ್ಳೆಯ ಗೆಳೆತನವಿತ್ತು. ಅವಳು ರಾತ್ರಿಯ ವೇಳೆಯಲ್ಲಿ ಸ್ಟೋರ್ ರೂಮುಗಳಲ್ಲಿ ಕಳ್ಳತನವಾಗಿದೆ, ನಿಮ್ಮ ಸ್ಟೋರ್ ರೂಮಿನ ಬಾಗಿಲು ಸಹ ತೆರೆದಿದೆ ಎಂದು ಹೇಳಲು ಬಂದಳು. ಲಾರ್ಸ್ ಮತ್ತು ನಾನು ಕೂಡಲೇ ಮೆಟ್ಟಿಲುಗಳಲ್ಲಿ ಇಳಿದು ಕೆಳಗಿದ್ದ ಬೇಸ್‌ಮೆಂಟಿನ ನಮ್ಮ ಸ್ಟೋರ್ ರೂಮಿಗೆ ಹೋದೆವು. ಲಾರ್ಸ್‌ನ ಹಳೆಯ ಸೈಕಲ್ ಮಾಯವಾಗಿತ್ತು. ನಮ್ಮಿಬ್ಬರಲ್ಲಿ ಒಬ್ಬರು ಸ್ಟೋರ್ ರೂಮಿಗೆ ಬೀಗ ಹಾಕುವುದನ್ನು ಮರೆತಿದ್ದು ಆಗ ನಮ್ಮ ಗಮನಕ್ಕೆ ಬಂತು. ಲಾರ್ಸ್ ಇದ್ದಕ್ಕಿದ್ದಂತೆ, ನೀನು ಸ್ಟೋರ್ ರೂಮಿಗೆ ಬೀಗ ಹಾಕಲಿಲ್ಲವೆಂದು ನನ್ನ ಮೇಲೆ ಆರೋಪವನ್ನು ಹೊರಿಸಿದ. ನಾನು ಲಾರ್ಸ್‌ಗೆ, ಇದನ್ನು ನೀವು ಹೇಗೆ ಹೇಳ್ತೀರಿ, ನಾನು ಸದಾ ಎಚ್ಚರಿಕೆಯನ್ನು ವಹಿಸುತ್ತೇನೆ, ನೀವು ಯಾವಾಗಲೋ ಸ್ಟೋರ್ ರೂಮಿಗೆ ಬಂದಿರಬೇಕು, ಬೀಗ ಹಾಕುವುದನ್ನು ಮರೆತಿರಬೇಕು, ಅಥವಾ ಕಳ್ಳನೇ ಬೀಗವನ್ನು ಮಾಯ ಮಾಡಿರಬೇಕು ಎಂದು ಹೇಳಿದೆ. ಆದರೆ ಅವನು ತನ್ನ ತಪ್ಪನ್ನು ಒಪ್ಪಲು ಸಿದ್ಧನಿರಲಿಲ್ಲ, ಬೇರೆ ವಿಷಯವನ್ನು ಕೇಳಲು ಸಹ ಸಿದ್ಧನಿರಲಿಲ್ಲ. ನೀನು ಮನೆಯ ಬಗ್ಗೆ ಗಮನವನ್ನೇ ಕೊಡುವುದಿಲ್ಲವೆಂದು ನನ್ನನ್ನೇ ಹಳಿಯುತ್ತಿದ್ದ.

ಲಾರ್ಸ್ ತನ್ನ ಆ ಸೈಕಲ್ಲನ್ನು ಉಪಯೋಗಿಸುತ್ತಲೇ ಇರಲಿಲ್ಲ. ಅದು ಬೇಸ್‌ಮೆಂಟಿನಲ್ಲಿ ಹಾಗೆಯೇ ವ್ಯರ್ಥವಾಗಿ ಬಿದ್ದಿರುತ್ತಿತ್ತು. ನಾನು ನಗುತ್ತಾ ಹೇಳಿದೆ, 'ಲಾರ್ಸ್, ಸದ್ಯ ಕಳ್ಳ ನಿಮ್ಮ ಸೈಕಲ್ಲನ್ನು ತಗೊಂಡು ಹೋದದ್ದು ಒಳ್ಳೆಯದಾಯಿತು. ಅದು ಹೋದದ್ದರಿಂದ ಸ್ಟೋರ್ ರೂಮಿನಲ್ಲಿ ಸ್ಥಳಾವಕಾಶವಾಯಿತು.'

ಈ ಮಾತು ಮುಂದುವರೆದು ಬ್ರಹ್ಮಾಂಡವಾಯಿತು. ಅವನು ಅಲ್ಲಿಯ ಬೇಸ್‌ಮೆಂಟಿನ ಸಂಕೀರ್ಣ ಜಾಗದಲ್ಲಿ ನನ್ನನ್ನು ಕೆಡವಿ, ನನ್ನ ತಲೆಕೂದಲುಗಳನ್ನು ಹಿಡಿದು, ಹೊಡೆಯಲಾರಂಭಿಸಿದ. ನನಗೆ ಹೊಡೆಯುತ್ತಿರುವುದನ್ನು ಅಕ್ಕಪಕ್ಕದ ಮೂರ್ನಾಲ್ಕು ಮನೆಯವರು ನೋಡಿದರು. ನೋಡನೋಡುತ್ತಿರುವಂತೆ ಅಲ್ಲಿ ಜನ ಜಮಾಯಿಸಿದರು. ಆದರೂ ಯಾರಿಂದಲೂ ಅವನನ್ನು ತಡೆಯಲು ಸಾಧ್ಯವಾಗಲಿಲ್ಲ. ಒಬ್ಬರು ಈ ಘಟನೆಯನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದರು. ಲಾರ್ಸ್ ಎಲ್ಲರೆದುರು ಬಹಿರಂಗವಾಗಿ ನನಗೆ ಕ್ರೂರವಾಗಿ ಹೊಡೆಯುತ್ತಿದ್ದ. ಯಾರೋ ಒಬ್ಬರು ಪೊಲೀಸರನ್ನು ಕರೆಸಿದರು.

ಪೊಲೀಸರನ್ನು ನೋಡಿದ ಕೂಡಲೇ ಲಾರ್ಸ್ ಓಟ ಕಿತ್ತ. ಪೊಲೀಸರು ರಿವಾಲ್ವರ್ ಹಿಡಿದು ಅವನನ್ನು ಹಿಂಬಾಲಿಸಿದರು... ಆದರೆ ಅವನು ನಿಲ್ಲಲಿಲ್ಲ. ಅವನು ಬೇಸ್‌ಮೆಂಟಿನ ಹಿಂದಿನ ಮೆಟ್ಟಿಲುಗಳಿಂದ ಹತ್ತಿ ತನ್ನ ಫ್ಲ್ಯಾಟ್ ಕಡೆಗೆ ಓಡಿದ. ಪೊಲೀಸರು ಅಲ್ಲಿಗೆ ಬರುವಷ್ಟರಲ್ಲಿ, ಅವನು ಬಾಲ್ಕನಿಯಿಂದ ಕೆಳಗೆ ಹಾರಿ, ಕಾರ್ ಪಾರ್ಕಿಂಗ್‌ಗೆ ಹೋದ. ಪೊಲೀಸರಿಗೆ ನಮ್ಮ ವಾಸಸ್ಥಳದ ಬಗ್ಗೆ ನಿಶ್ಚಿತ ಮಾಹಿತಿ ಇರಲಿಲ್ಲ, ಹೀಗಾಗಿ ಲಾರ್ಸ್ ಇಬ್ಬರು ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ, ಪಾರ್ಕಿಂಗ್‌ನಿಂದ ತನ್ನ ಕಾರಿನಲ್ಲಿ ಕೂತು ಪಲಾಯನ ಮಾಡಿದ.

'ಓಡಿ ಹೋದ... ಓಡಿ ಹೋದ...' ಕೂಗಾಟ ಕೇಳಿಸಿತು.

ಪೊಲೀಸರು ಫೋನ್ ಮಾಡಿ ಇನ್ನಿತರ ಪೊಲೀಸರನ್ನು ಕರೆಸಿದರು. ಅಕ್ಕಪಕ್ಕದವರಿಂದ ಅವನ ಕಾರಿನ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು. ನಾಲ್ಕು ಪೊಲೀಸ್ ವಾಹನಗಳು ಸೈರನ್ ಬಾರಿಸುತ್ತಾ ಅವನನ್ನು ಹಿಡಿಯಲು ಹೊರಟವು. ಲಾರ್ಸ್ ಅತ್ತಇತ್ತ, ಗಲ್ಲಿ ರಸ್ತೆಗಳಲ್ಲಿ ಪೊಲೀಸರಿಂದ ತಪ್ಪಿಸಿಕೊಳ್ಳುತ್ತಾ ಹೋಗುತ್ತಿದ್ದ. ಸಾಕಷ್ಟು ಹೊತ್ತಿನ ಪ್ರಯತ್ನದ ನಂತರ, ಅವನನ್ನು ಘೇರಾಯಿಸಿ ಹಿಡಿಯುವುದರಲ್ಲಿ ಪೊಲೀಸರು ಯಶಸ್ವಿಯಾದರು.

ಇತ್ತ ನಾನು ರಕ್ತಮಯವಾಗಿ, ಮೂರ್ಛಾವಸ್ಥೆಯಲ್ಲಿ ಬಿದ್ದಿದ್ದೆ. ಪೊಲೀಸರೇ ಆ್ಯಂಬುಲೆನ್ಸ್ ಕರೆಸಿದರು. ಆ್ಯಂಬುಲೆನ್ಸ್ ಸೈರನ್ ಬಾರಿಸುತ್ತಾ ನನ್ನನ್ನು ಆಸ್ಪತ್ರೆಗೆ ಕರೆದೊಯ್ದಿತು. ನನಗೆ ಈ ವಿಷಯ ನನ್ನ ಇಬ್ಬರು ಅಕ್ಕಪಕ್ಕದ ಮನೆಯವರಿಂದ ಆಸ್ಪತ್ರೆಯಲ್ಲಿ ತಿಳಿದಿತ್ತು. ಲಾರ್ಸ್ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಓಡಿದ್ದು, ಪೊಲೀಸರು ಅದೆಷ್ಟು ಕಷ್ಟಪಟ್ಟು ಅವನನ್ನು ಹಿಡಿದರು ಎಂಬುದನ್ನು ಅವರು ಹೇಳಿದ್ದರು. ಕೆಲವರು, ನಾವು ಇದೇ ಮೊದಲು ಪೊಲೀಸರು ಅಪರಾಧಿಯೊಬ್ಬನನ್ನು ಹಿಂಬಾಲಿಸಿದ ದೃಶ್ಯವನ್ನು ನೋಡಿದ್ದು ಎಂದು ಭಯದಿಂದ ಹೇಳಿದರು.

ಎಲ್ಲವನ್ನೂ ಕೇಳಿ ನನಗೆ ಅಪಾರ ದುಃಖವಾಯಿತು. ಎಲ್ಲವೂ ತುಂಬಾ ವಿಷಾದಮಯವಾಗಿತ್ತು. ಆದರೆ ಯಾವುದೂ ನನ್ನ ವಶದಲ್ಲಿರಲಿಲ್ಲ. ಆಸ್ಪತ್ರೆಯಲ್ಲಿ ನಾಲ್ಕು ದಿನಗಳಿದ್ದೆ. ಲಾರಾ ಹೂವಿನಗುಚ್ಛ ಹಿಡಿದು ನನ್ನನ್ನು ನೋಡಲು ಬಂದರು. ಅವರನ್ನು ನೋಡಿ ನಾನು ಬಿಕ್ಕಳಿಸಿದೆ. ಸಮಾಧಾನದ ಮಾತುಗಳು, ಸಹಾನುಭೂತಿಯ ಭಾವನೆ ಮತ್ತು ಯಾವುದೇ ಧೈರ್ಯವನ್ನು ಹೇಳದೆ ಲಾರಾ ತಟಸ್ಥ ಧ್ವನಿಯಲ್ಲಿ ಹೇಳಿದರು, 'ನೀನು ಮತ್ತು ಲಾರ್ಸ್ ಇನ್ನು ಜೊತೆಯಲ್ಲಿ ಇರಲಾರಿರಿ. ನೀನು ವಿಚ್ಛೇದನ ತೆಗೆದುಕೊಂಡು ಬಿಡು!'

ನಾವಿಬ್ಬರೂ ಸಮಾನ ದೋಷಿಗಳು ಎಂಬ ಭಾವನೆ ಅವರ ಮಾತಿನ ಧಾಟಿಯಲ್ಲಿತ್ತು. ನೀವೆಂಥ ತಾಯಿ ಎಂದು ಹೇಳಲು ಮನಸ್ಸಾಯಿತು. ಲಾರ್ಸ್ ಒಬ್ಬ ಸಾಮಾನ್ಯ ವ್ಯಕ್ತಿತ್ವದ ಮನುಷ್ಯನೂ ಆಗದಂತೆ ನೀವು ಅವನನ್ನು ಬೆಳೆಸಿದರಲ್ಲ... ನಾನೂ ಒಬ್ಬ ತಾಯಿ. ಒಂದು ವೇಳೆ ನನ್ನ ಮಗ ತನ್ನ ಹೆಂಡತಿಯ ಮೇಲೆ ಕೈ ಮಾಡಿದರೆ, ನಾನು ಅವನನ್ನು ಸುಮ್ಮನೆ ಬಿಡಲ್ಲ, ಅವನಿಗೇ ಥಳಿಸುತ್ತೇನೆ ಎಂದೂ ಹೇಳಲು ಮನಸ್ಸಾಯಿತು... ಆದರೆ ಹೇಳದಾದೆ. ನನ್ನ ತುಟಿಗಳು ಕಂಪಿಸಿದವು, ಅಷ್ಟೆ. ಅವರು ಬಂದಿದ್ದಕ್ಕೆ ನಾನು ಧನ್ಯವಾದವನ್ನಷ್ಟೇ ಹೇಳಿದೆ.

ಆಸ್ಪತ್ರೆಯಿಂದ ಬಿಡುಗಡೆಯಾದಾಗ ಲಾರ್ಸ್‌ನ ಮನೆಗೆ ಏಕೆ ಹೋಗಲಿ? ಎಂದು ಯೋಚಿಸಿದೆ. ಅವನು ಪೊಲೀಸರ ವಶದಲ್ಲಿದ್ದ. ತನ್ನ ಹೆಂಡತಿಯನ್ನು ಹಿಂಸಿಸುವ ವ್ಯಕ್ತಿ ತನ್ನ ಜೀವನದಲ್ಲಿ ಎಂದೂ ಯಶಸ್ಸನ್ನು ಪಡೆಯಲಾರ. ವಿವಾಹ ಪ್ರೀತಿ ಅಥವಾ ಸಂಬಂಧಗಳ ನಂಟು ಮಾತ್ರವಲ್ಲ, ಅದು ಪರಸ್ಪರರು ಗೌರವಿಸುವಂಥ ಬಂಧನ ಸಹ ಆಗಿದೆ. ಲಾರ್ಸ್‌ನೊಂದಿಗಿನ ನನ್ನ ವೈವಾಹಿಕ ಜೀವನಕ್ಕೆ ಯಾವುದೇ ಅರ್ಥವಿರಲಿಲ್ಲ.

***

ನನ್ನ ಅದೃಷ್ಟದಲ್ಲಿ ಮಹಿಳಾ ಆಶ್ರಯಗೃಹದಲ್ಲಿರುವುದು ಬರೆದಿತ್ತು. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಒಂದು ಕ್ರೀಸೆಂಟರ್‌ನಲ್ಲಿ ಆಶ್ರಯ ಪಡೆಯಬೇಕಾಯಿತು. ಕ್ರೀಸೆಂಟರ್ ಒಂದು ಮಹಿಳಾ ಕೇಂದ್ರವಾಗಿದ್ದು, ಅಲ್ಲಿ ಜೀವನದ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಮನೆ–ಮಠ ತೊರೆದಿದ್ದ ಮಹಿಳೆಯರಿಗೆ ಅಲ್ಪಕಾಲದ ಆಶ್ರಯವನ್ನು ಕೊಡಲಾಗುತ್ತಿತ್ತು. ಸಾಮಾಜಿಕ ಕಾರ್ಯಕರ್ತರು, ವೈದ್ಯರು, ಪೊಲೀಸರು ಅಥವಾ ಬೇರೆಯವರ ಮೂಲಕ ಎರಡರಿಂದ ಆರು ತಿಂಗಳವರೆಗೆ ಮಹಿಳೆಯರು ಅಲ್ಲಿರಬಹುದಿತ್ತು. ಪೊಲೀಸರು ಮತ್ತು ವೈದ್ಯರು ನನ್ನನ್ನು ಅಲ್ಲಿಗೆ ಕಳುಹಿಸಿದರು. 21–65 ವರ್ಷದ ಮಹಿಳೆಯರು ಕ್ರೀಸೆಂಟರ್‌ನಲ್ಲಿದ್ದರು. ಕೆಲವರೊಂದಿಗೆ ಚಿಕ್ಕ ಮಕ್ಕಳೂ ಇದ್ದರು.

(ಸಶೇಷ)